O.S .No.130/2020
ಪಿ.ಡಬ್ಲ್ಯೂ-1

ದಿನಾಂಕ: 13.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಲ್.ಜಿ. ವಕೀಲರಿಂದಃ</u>

ಸ.ನಂ.14 ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸ.ನಂ.14 ರ ಪಹಣಿಯನ್ನು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಸ.ನಂ.14 ರ ಪಹಣಿಯನ್ನು ತೆಗೆದುಕೊಂಡಿಲ್ಲ, ನಮಗೆ ಜಮೀನು ಇರುವುದು ಸ.ನಂ.15 ರಲ್ಲಿ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಸ್ವಾಧೀನ ಇರುವವರ ಹೆಸರು ಪಹಣಿಯ ಕಲಂ 12 ರಲ್ಲಿ ನಮೂದಿರುತ್ತದೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು , ಖಾತೆಯಿಲ್ಲದೇ ಪಹಣಿ ಬರುವುದಿಲ್ಲ ಎಂದು ಹೇಳುತ್ತಾರೆ.

ಸಾಲವನ್ನು ಯಾವ ಸಾಲಿನಲ್ಲಿ ತೆಗೆದುಕೊಳ್ಳಲು ಹೋದಾಗ ಖಾತೆಯಾಗದ ವಿಚಾರ ನಿಮಗೆ ಗೊತ್ತಾಯಿತು ಎಂದರೆ ಸಾಕ್ಷಿ ದಾವೆ ಹೂಡುವ ಸಾಲಿನಲ್ಲಿ, ಯಾವ ವರ್ಷ ಎಂದು ನೆನಪಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ ನನಗೆ ಸೇರಿದ ಸ.ನಂ.18 ರಲ್ಲಿ 2 ಎಕರೆ ಜಮೀನು ಇದೆ. ಸದರಿ ಜಮೀನಿನ ಮೇಲೆ ಸಾಲ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಿಮ್ಮ ತಂದೆ ನಿಮ್ಮ ಜನಾಂಗಕ್ಕೆ ಯಜಮಾನರು ಎಂದರೆ ಸರಿ. ಸ.ನಂ.15 ಪೂರ್ಣ ವ್ಯವಸಾಯದ ಜಮೀನು ಎಂದರೆ ಸಾಕ್ಷಿ 1 ಎಕರೆ 18 ಗುಂಟೆ ವ್ಯವಸಾಯದ ಜಮೀನು ಇದ್ದು, ನಮ್ಮದು 5 ಗುಂಟೆ ಸ್ವಾಧೀನ ಎಂದು ಹೇಳುತ್ತಾರೆ. ಹಿತ್ತಲು ಇರುವ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲಾತಿ ಇಲ್ಲ, ಅನುಭವದಲ್ಲಿದ್ದೇವೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸುತ್ತ ಕಳ್ಳಿ ಬೇಲಿ ಇದೆ. ಕಳ್ಳಿ ಬೇಲಿಯನ್ನು ಯಾವಾಗ ಹಾಕಿರುತ್ತೀರಿ ಎಂದರೆ ಸಾಕ್ಷಿ ನನ್ನ ತಂದೆ ಇದ್ದ ಕಾಲದಿಂದ ಹಾಕಿದ್ದೇವೆ ಎಂದು ಹೇಳುತ್ತಾರೆ. ಹಿತ್ತಲು ಇರುವ ಬಗ್ಗೆ ಪೊಟೋವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಪೊಟೋ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಿಮ್ಮ ತಂದೆ ತಿಳುವಳಿಕೆ ಇದ್ದಂತಹ ವ್ಯಕ್ತಿ ಎಂದರೆ ಸರಿ. ಕ್ರಯ ಪತ್ರ 1976 ರಲ್ಲಿ ಆಗಿರುತ್ತದೆ. ಕ್ರಯ ಪತ್ರವಾದ 12 ವರ್ಷಗಳ ಒಳಗೆ ದಾವೆಯನ್ನು ಹೂಡಿಲ್ಲ ಎಂದರೆ ಸಾಕ್ಷಿ ಅವಿದ್ಯಾವಂತನಾಗಿರುವುದರಿಂದ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯನ್ನು ಯಾವ ದಿನಾಂಕದಂದು ತಿದ್ದುಪಡಿ ಕ್ರಯ ಪತ್ರ ಬರೆದುಕೊಡುವಂತೆ ಕೇಳಿರುತ್ತೀರಿ ಎಂದರೆ ಸಾಕ್ಷಿ ಈಗ್ಗ 1-2 ವರ್ಷಗಳ ಹಿಂದೆ ಎಂದು ಹೇಳುತ್ತಾರೆ. ವಕೀಲರ ಮುಖೇನ ಪ್ರತಿವಾದಿ ಬದುಕಿದ್ದಾಗ

ನೀಡಲಾಯಿತು ಎಂದು ಹೇಳುವ ನೋಟೀಸ್, ಪ್ರತಿವಾದಿಗೆ ಜಾರಿಯಾಗಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸುತ್ತ ಕಳ್ಳಿ ಬೇಲಿ ಹಾಕಿ ಸ್ವಾಧೀನ ಇದ್ದೇನೆಂದು ಸುಳ್ಳಾಗಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 1976 ರಿಂದ ಇಲ್ಲಿಯವರೆಗೂ ದಾವಾ ಆಸ್ತಿಯಲ್ಲಿ ನೀವೇ ಸ್ವಾಧೀನ ಇರುವುದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ತಂದೆ ಚಿಕ್ಕಹೈದ ಎಂದಿಗೂ ನಿಮ್ಮ ತಂದೆಗೆ ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

1976 ರಲ್ಲಿ ದಾವಾ ಆಸ್ತಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಮೃತ ಚಿಕ್ಕಹೈದೆಗೌಡರ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. 1984-85 ರಲ್ಲಿ ಪೌತಿ ಆಧಾರದ ಮೇರೆಗೆ ಚಿಕ್ಕಹೈದೆಗೌಡರ ಹೆಸರಿನಲ್ಲಿ ಖಾತೆ ಬಂದಿರುವುದು ಎಂದರೆ ಸಾಕ್ಷಿ ಖಾತೆ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಕ್ರಯ ಪತ್ರ ಆಗಿರುವುದು 1976 ರಲ್ಲಿ ಎಂದು ಹೇಳುತ್ತಾರೆ. 1984-85 ರಲ್ಲಿ ಚಿಕ್ಕಹೈದೆಗೌಡರಿಗೆ ಖಾತೆ ಬಂದಿದ್ದು, 1976 ರಲ್ಲಿ ಕ್ರಯ ಪತ್ರ ಬರೆದುಕೊಡಲು ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿಪಿ-2 ರಂತೆ ಪಹಣಿಯ ಕಲಂ 12 ರಲ್ಲಿ ಚಿಕ್ಕಹೈದೆಗೌಡರ ಹೆಸರು ನಮೂದು ಇದೆ ಎಂದರೆ ಸಾಕ್ಷಿ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ, ದಾಖಲೆಗಳನ್ನು ಸೃಷ್ಟಿಸಿಕೊಂಡು, ಅನ್ಯತಾ ಪಾಯಿದೆ ಹೊಂದಲು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಾರಾಯಣಚಾರಿ ರವರು ನಮ್ಮ ಸಂಬಂಧ, ಜಾತಿಯವರು ಎಂದು ಹೇಳುತ್ತಾರೆ. ನಿಮಗೆ ದಾವಾ ಆಸ್ತಿಯ ಮಾಲೀಕತ್ವ ಹಾಗೂ ಸ್ವಾಧೀನದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.